**National**
**Kannada**
**02.04.2025 19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

1. ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ - ೨೦೨೫ ಮಂಡನೆ - ಮುಂದುವರೆದ ಪರ-ವಿರೋಧ ಚರ್ಚೆ
2. ವಲಸೆ ಮತ್ತು ವಿದೇಶಿಗರ ಮಸೂದೆ - ೨೦೨೫ : ರಾಜ್ಯಸಭೆಯಲ್ಲಿಂದು ಅಂಗೀಕಾರ
3. ೬ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಭಾಗವಹಿಸಲು ಥಾಯ್ಲೆಂಡ್‌ಗೆ ನಾಳೆ ಪ್ರಧಾನಿ ಪ್ರವಾಸ
4. ಐಪಿಎಲ್ ಟಿ-೨೦ ಕ್ರಿಕೆಟ್ : ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಟಾಸ್ ಗೆದ್ದ ಗುಜರಾತ್ ಟೈಟಾನ್ಸ್ ಫೀಲ್ಡಿಂಗ್ ಆಯ್ಕೆ

<><><><>

ವಕ್ಫ್ (ತಿದ್ದುಪಡಿ) ಮಸೂದೆ, ೨೦೨೫ ಮತ್ತು ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆ, ೨೦೨೪ ಎರಡು ಮಸೂದೆಗಳನ್ನು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಇಂದು ಲೋಕಸಭೆಯಲ್ಲಿ ಮಂಡಿಸಿದರು. ಇಂದು ಸಂಸತ್ತಿನಲ್ಲಿ ಮಂಡಿಸಲಾದ ಈ ಮಸೂದೆಯನ್ನು ವಕ್ಫ್ (ತಿದ್ದುಪಡಿ) ಮಸೂದೆ, ೨೦೨೪ ಎಂದು ಕರೆಯಲಾಗುವುದಿಲ್ಲ, ಬದಲಿಗೆ ವಕ್ಫ್ (ತಿದ್ದುಪಡಿ) ಮಸೂದೆ, ೨೦೨೫ ಎಂದು ಕರೆಯಲಾಗುತ್ತದೆ. ಈ ವೇಳೆ ಮಾತನಾಡಿದ ಅವರು, ಈ ಮಸೂದೆಯಿಂದ ಮುಸ್ಲಿಂಮರ ಧಾರ್ಮಿಕ ಆಚರಣೆಗೆ ಯಾವುದೇ ತೊಂದರೆ ಇಲ್ಲ. ಯಾರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಉದ್ದೇಶ ಹೊಂದಿಲ್ಲ. ಬದಲಾಗಿ ಇದು ವಕ್ಫ್ ಬೋರ್ಡ್‌ಗಳಿಗೆ ಸಂಬಂಧಿಸಿದ ಆಸ್ತಿಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ಅವರು ಹೇಳಿದರು.

ಧ್ವನಿ: ಕಿರಣ್ ರಿಜಿಜು (೨೬ ಸೆಕೆಂಡ್‌ಗಳು)

ಈ ಕುರಿತಂತೆ ಲೋಕಸಭೆಯಲ್ಲಿ ಚರ್ಚೆ ಮುಂದುವರೆದಿದ್ದು, ಆಡಳಿತ ಪಕ್ಷದ ಸದಸ್ಯರು ಮಸೂದೆಯನ್ನು ಸಮರ್ಥಿಸಿಕೊಂಡಿದ್ದಾರೆ. ಇದಕ್ಕೂ ಮೊದಲು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಜಂಟಿ ಸಂಸದೀಯ ಸಮಿತಿಯು ಸಂಪುಟವು ಅನುಮೋದಿಸಿದ ನಂತರ ಈ ಮಸೂದೆಯನ್ನು ತರಲಾಗಿದೆ ಎಂದು ಹೇಳಿದರು.

ಧ್ವನಿ : ಅಮಿತ್ ಶಾ (೨೧ ಸೆಕೆಂಡ್‌ಗಳು)

ಪ್ರಸ್ತುತ ವಿಧೇಯಕದ ಪ್ರಕಾರ ವಕ್ಫ್ ಮಂಡಳಿಗಳು ವಿವಿಧ ಮುಸ್ಲಿಂ ಪಂಗಡಗಳು, ಮಹಿಳೆಯರು ಮತ್ತು ಮುಸ್ಲಿಂಯೇತರರನ್ನು ಒಳಗೊಂಡಂತೆ ಇತರರ ಪ್ರಾತಿನಿಧ್ಯವನ್ನು ಹೊಂದಿರಲಿದೆ ಎಂದ ಸಚಿವರು ಪ್ರತಿಪಕ್ಷಗಳು ಮಸೂದೆ ಕುರಿತು ಜನರನ್ನು ದಾರಿ ತಪ್ಪಿಸುತ್ತಿವೆ ಎಂದು ಆರೋಪಿಸಿದರು.

ಬೆಲೆ ಏರಿಕೆ, ನಿರುದ್ಯೋಗ, ವೈಫಲ್ಯ ಮರೆ ಮಾಚಲು ಸರ್ಕಾರ ಈ ಮಸೂದೆ ತಂದಿದೆ ಎಂದು ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ. ಕೇಂದ್ರ ಸರ್ಕಾರ ಮಂಡನೆ ಮಾಡಿರುವ ವಕ್ಫ್ ಬಿಲ್ ಸಂವಿಧಾನಕ್ಕೆ ವಿರುದ್ಧ ವಾದ ನಡೆ ಎಂದು ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮೈಸೂರಿನಲ್ಲಿಂದು ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧಾರ್ಮಿಕ ಸಂಸ್ಥೆಗಳ ವಿಚಾರಗಳು ಹಾಗೂ ಭೂಮಿಗೆ ಸಂಬಂಧಿಸಿದ ವಿಚಾರಗಳು ರಾಜ್ಯಕ್ಕೆ ಸೀಮಿತವಾದದ್ದು, ಇದರಲ್ಲಿ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡಲು ಯಾವುದೇ ಅಧಿಕಾರವಿಲ್ಲ ಎಂದರು.

ಧ್ವನಿ : ದಿನೇಶ್ ಗುಂಡೂರಾವ್

<><><><>

ವಲಸೆ ಮತ್ತು ವಿದೇಶಿಗರ ಮಸೂದೆ - ೨೦೨೫ ರಾಜ್ಯಸಭೆಯಲ್ಲಿಂದು ಅಂಗೀಕಾರಗೊಂಡಿದೆ. ಈ ಮಸೂದೆಯು ಈಗಾಗಲೇ ಲೋಕಸಭೆಯಲ್ಲಿ ಅಂಗೀಕಾರಗೊಂಡಿದೆ. ಈ ಕಾಯ್ದೆಯು ಭಾರತದಲ್ಲಿ ವಿದೇಶಿಯರ ವಲಸೆ, ಪ್ರವೇಶ ಮತ್ತು ತಂಗುವಿಕೆಯನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ಇದು ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶ) ಕಾಯ್ದೆ-೧೯೨೦, ವಿದೇಶಿಗರ ನೋಂದಣಿ ಕಾಯ್ದೆ-೧೯೩೯, ವಿದೇಶಿಯರ ಕಾಯ್ದೆ-೧೯೪೬ ಮತ್ತು ವಲಸೆ (ವಾಹಕರ ಹೊಣೆಗಾರಿಕೆ) ಕಾಯ್ದೆ-೨೦೦೦ ಗಳನ್ನು ರದ್ದುಗೊಳಿಸುತ್ತದೆ. ಈ ಕಾಯ್ದೆಯು ವಲಸೆ ಕಾನೂನುಗಳನ್ನು ಆಧುನೀಕರಿಸುವ ಉದ್ದೇಶವನ್ನು ಹೊಂದಿದ್ದು, ಪಾಸ್‌ಪೋರ್ಟ್‌ಗಳು, ಪ್ರಯಾಣ ದಾಖಲೆಗಳು, ವೀಸಾ ಸೇರಿದಂತೆ ನೋಂದಣಿಗೆ ಸಂಬಂಧಿಸಿದ ಕೆಲವು ಅಧಿಕಾರಗಳನ್ನು ಕೇಂದ್ರ ಸರ್ಕಾರಕ್ಕೆ ನೀಡುವ ನಿಬಂಧನೆಗಳನ್ನು ಹೊಂದಿದೆ. ಈ ಮಸೂದೆಯು ಬಹು ಕಾನೂನುಗಳ ಅತಿಕ್ರಮಣವನ್ನು ತಪ್ಪಿಸಲು ತರಲಾಗಿದೆ.

<><><><>

ಇದೇ ೭ ರಿಂದ ಪೋರ್ಚುಗಲ್ ಮತ್ತು ಸ್ಲೋವೇಕಿಯಾ ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ೪ ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ತಮ್ಮ ಭೇಟಿಯ ಸಂದರ್ಭದಲ್ಲಿ ಪೋರ್ಚುಗಲ್‌ನ ರಾಷ್ಟ್ರಪತಿ ಮಾರ್ಸೆಲೊ ರೆಬೆಲೊ ಡಿ ಸೌಸಾ ಅವರನ್ನು ಭೇಟಿಯಾಗಲಿದ್ದು, ನಿಯೋಗ ಮಟ್ಟದ ಮಾತುಕತೆ ನಡೆಸಲಿದ್ದಾರೆ. ಭಾರತ-ಪೋರ್ಚುಗಲ್ ರಾಜ ತಾಂತ್ರಿಕ ಸಂಬಂಧಗಳ ೫೦ ವರ್ಷಗಳ ಸಂಭ್ರಮಾಚರಣೆಯ ಹಿನ್ನೆಲೆಯಲ್ಲಿ ೨೭ ವರ್ಷಗಳ ನಂತರ ಈ ಭೇಟಿ ಮಹತ್ವದ್ದಾಗಿದೆ. ನಂತರ ರಾಷ್ಟ್ರಪತಿ ದ್ರೌಪದಿ ಮುರ್ಮು, ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಅವರ ಆಹ್ವಾನದ ಮೇರೆಗೆ ಇದೇ ೯ ರಂದು ಸ್ಲೋವೇಕಿಯಾಗೆ ಪ್ರಯಾಣ ಬೆಳೆಸಲಿದ್ದಾರೆ. ಭೇಟಿಯ ಸಂದರ್ಭದಲ್ಲಿ ಅಧ್ಯಕ್ಷ ಮತ್ತು ಪ್ರಧಾನಿ ರಾಬರ್ಟ್ ಫಿಕೊ ಅವರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಈ ಎರಡೂ ಭೇಟಿಗಳ

ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ.

<><><><>

ಮುಂದಿನ ಒಂದೂವರೆ ವರ್ಷಗಳಲ್ಲಿ ಎಲ್ಲ ರೈಲು ನಿಲ್ದಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಸಿ-ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ಈಗಾಗಲೇ ದೇಶದ ವಿವಿಧ ಭಾಗಗಳ ರೈಲ್ವೆ ನಿಲ್ದಾಣಗಳಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಅವರು ತಿಳಿಸಿದರು. ಭಾರತೀಯ ರೈಲ್ವೆ ಮಹಿಳೆಯರ ಸುರಕ್ಷಿತವಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದ್ದು, ರೈಲ್ವೆ ಸಂರಕ್ಷಣಾ ಪಡೆಯಲ್ಲಿ ಶೇಕಡ ೯.೪ ರಷ್ಟು ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರತಿ ವಿಭಾಗ, ವಲಯ ಮತ್ತು ರೈಲ್ವೆ ಮಂಡಳಿಯಲ್ಲಿ ವಾರ್‌ರೂಮ್‌ಗಳನ್ನು ಸ್ಥಾಪಿಸಲಾಗಿದ್ದು, ಅದರ ಮೂಲಕ ನಿಲ್ದಾಣಗಳನ್ನು ನಿರಂತರ ಮೇಲ್ವಿಚಾರಣೆ ಮಾಡಲಾಗುತ್ತಿವೆ ಎಂದು ಅವರು ತಿಳಿಸಿದರು.

<><><><>

ಆರನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ನಾಳೆ ಬೆಳಗ್ಗೆ ಥಾಯ್ಲೆಂಡ್‌ಗೆ ೨ ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ೨೦೧೬ ಮತ್ತು ೨೦೧೯ರ ನಂತರ ಥಾಯ್ಲೆಂಡ್‌ಗೆ ಇದು ಪ್ರಧಾನಿಯವರ ೩ನೇ ಭೇಟಿಯಾಗಿದೆ. ಈ ಭೇಟಿಯ ಸಮಯದಲ್ಲಿ, ಪ್ರಧಾನಿಯವರು ನಾಳೆ ಬ್ಯಾಂಕಾಕ್‌ನಲ್ಲಿ ಥಾಯ್ ಪ್ರಧಾನಿ ಪೇಟೊಂಗ್‌ಟಾರ್ನ್ ಶಿನವಾತ್ರ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ‘ಬಿಮ್‌ಸ್ಟೆಕ್ - ಸಮೃದ್ಧ, ಸ್ಥಿತಿಸ್ಥಾಪಕ ಮತ್ತು ಮುಕ್ತ" ಧ್ಯೇಯದೊಂದಿಗೆ ಇದೇ ಶುಕ್ರವಾರ ನಡೆಯಲಿರುವ ೬ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಬ್ಯಾಂಕಾಕ್ ವಿಷನ್ ೨೦೩೦ ಅನ್ನು ಅಂಗೀಕರಿಸಲಾಗುವುದು.

<><><><>

ರಾಷ್ಟ್ರೀಯ ಶಿಕ್ಷಣ ನೀತಿ - ಎನ್‌ಇಪಿ -೨೦೨೦ರ ಸುಧಾರಣೆಗಿಂತ ಹೆಚ್ಚಿನದ್ದಾಗಿದೆ ಮತ್ತು ಇದು ರಾಷ್ಟ್ರದ ಬೌದ್ಧಿಕ ಪುನರುಜ್ಜೀವನವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಪತ್ರಿಕೆಯೊಂದರಲ್ಲಿ ಕಳೆದ ದಶಕದಲ್ಲಿ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಪರಿವರ್ತನೆಯನ್ನು ಎತ್ತಿ ತೋರಿಸುವ ಲೇಖನವನ್ನು ಹಂಚಿಕೊಂಡಾಗ, ಪ್ರಧಾನಿ, ಶಿಕ್ಷಣ ಮತ್ತು ನಾವೀನ್ಯತೆಯ ಮೂಲಕ ಸ್ವಾವಲಂಬಿ, ಜಾಗತಿಕವಾಗಿ ಸ್ಪರ್ಧಾತ್ಮಕ ರಾಷ್ಟ್ರಕ್ಕೆ ಎನ್‌ಇಪಿ ದಾರಿಮಾಡಿಕೊಡುತ್ತಿದೆ ಎಂದು ಹೇಳಿದರು. ಕಳೆದ ದಶಕದಲ್ಲಿ ಶಿಕ್ಷಣ ವ್ಯವಸ್ಥೆಯೂ ತನ್ನ ಹಾದಿತಪ್ಪಿದೆ ಎಂಬ ಆರೋಪವನ್ನು ಧರ್ಮೇಂದ್ರ ಪ್ರಧಾನ್ ನಿರಾಕರಿಸಿದರು.

<><><><>

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಗುಜರಾತ್ ಟೈಟಾನ್ಸ್ ತಂಡ ಫೀಲ್ಡಿಂಗ್ ಆಯ್ದುಕೊಂಡಿದೆ. ಇತ್ತೀಚಿನ ವರದಿ ಬಂದಾಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ೧ ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೇ ೬ ರನ್ ಮಾಡಿ ಆಡುತ್ತಿದೆ.

<><><>

ಬೆಲ್ಜಿಯಂನಲ್ಲಿ ನಡೆದ ಪ್ರತಿಷ್ಠಿತ ಅಜೆಲ್‌ಹಾಫ್ ಸಿಎಸ್‌ಐ ಲೈಯರ್ ಕುದುರೆ ಸವಾರಿ ಸ್ಪರ್ಧೆಯಲ್ಲಿ ಭಾರತದ ಯುವ ಆಟಗಾರ್ತಿ ನಿಹಾರಿಕಾ ಸಿಂಘಾನಿಯಾ ಪ್ರಥಮ ಸ್ಥಾನ ಪಡೆದಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಈ ಸ್ಪರ್ಧೆಯಲ್ಲಿ, ನಿಹಾರಿಕಾ ಎರಡು ಹಂತಗಳ ವಿಶೇಷ ಸುತ್ತಿನಲ್ಲಿ ಹೊಟೀಸ್ ಚಾರ್ಬೋನಿಯರ್ ಕುದುರೆ ಸವಾರಿ ಮಾಡಿ ४೦.೭೨ ಮತ್ತು ४೦.೩४ ಪೆನಾಲ್ಟಿ ಪಾಯಿಂಟ್‌ಗಳೊಂದಿಗೆ ಸ್ಪರ್ಧೆ ಪೂರ್ಣಗೊಳಿಸಿ ಚಿನ್ನ ತಮ್ಮದಾಗಿಸಿಕೊಂಡರು.

<><><>

೨೦೨४-೨೫ರ ಹಣಕಾಸು ವರ್ಷದಲ್ಲಿ ಡಿಜಿಟಲ್ ಖರೀದಿ ವೇದಿಕೆಯಾದ ಸರ್ಕಾರಿ ಇ-ಮಾರ್ಕೆಟ್‌ಪ್ಲೇಸ್ - ಜೆಮ್ ಮೂಲಕ ೧ ಮಿಲಿಯನ್‌ಗಿಂತಲೂ ಹೆಚ್ಚು ಮಾನವಶಕ್ತಿ ಸಂಪನ್ಮೂಲಗಳನ್ನು ನೇಮಿಸಿಕೊಳ್ಳಲಾಗಿದೆ ಎಂದು ಜೆಮ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅಜಯ್ ಭಾದೂ ತಿಳಿಸಿದರು. ಈ ಕುರಿತು ಮಾತನಾಡಿದ ಅವರು, ವೇದಿಕೆಯು ಡಿಜಿಟಲ್ ಸಾಮರ್ಥ್ಯಗಳನ್ನು ಬಳಸಿಕೊಂಡಿದೆ ಮತ್ತು ಆಡಳಿತದ ವಿವಿಧ ಹಂತಗಳಲ್ಲಿ ಸರ್ಕಾರಿ ಖರೀದಿದಾರರಿಗೆ ಅಗತ್ಯವಿರುವ ಎಲ್ಲಾ ಸಂಭಾವ್ಯ ಸೇವೆಗಳಿಗೆ ಒಂದು ನಿಲ್ದಾಣ ಮಳಿಗೆಯಾಗಿ ಹೊರಹೊಮ್ಮಿದೆ ಎಂದರು. ಮಾನವಶಕ್ತಿ ಹೊರಗುತ್ತಿಗೆ ಸೇವೆಯು ಸರ್ಕಾರಿ ಸಂಸ್ಥೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಸರಳಗೊಳಿಸುವುದಲ್ಲದೆ, ಸಮಗ್ರ ಸೇವಾ ಮಟ್ಟದ ಒಪ್ಪಂದದ ಮೂಲಕ ಕಟ್ಟುನಿಟ್ಟಾದ ಕಾರ್ಮಿಕ ಅನುಸರಣೆಯನ್ನು ಖಚಿತಪಡಿಸುತ್ತದೆ ಎಂದು ಅವರು ಹೇಳಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>